# ಗರ್ಭಧಾರಣೆಗೆ ತಡವೇಕೆ?



**ಸುಮಾರು 10 ವರ್ಷಗಳ** ಹಿಂದೆ ಮದುವೆಯಾಗಿದ್ದ 35 ವರ್ಷದ (ಗಂಡ) 35 ವರ್ಷದ ಹೆಂಡತಿಯಾದ ಶ್ರೀ ಮತ್ತು ಶ್ರೀಮತಿ ಲಕ್ಷ್ಮೀ (ಹೆಸರು ಬದಲಾಯಿಸಿದೆ) ದಂಪತಿಗಳು ಫರ್ಟಿಲಿಟಿ ಚಿಕಿತ್ಸೆಗೆಂದು ನಮ್ಮ ಬಳಿಗೆ ಬಂದಿದ್ದರು. ಈ ಮೊದಲು ಇವರಿಗೆ ಬೇರೊಂದು ಆಸ್ಪತ್ರೆಯಲ್ಲಿ 2 ಬಾರಿ ಐವಿಎಫ್ ಮಾಡಲಾಗಿತ್ತಾದರೂ, ಕಳಪೆ ಭ್ರೂಣದಿಂದಾಗಿ ಅವು ವಿಫಲಗೊಂಡಿದ್ದವು. ಅವರಲ್ಲಿ ತುಂಬಾ ಕಳಪೆ ಗುಣಮಟ್ಟದ ಅಂಡಾಣುಗಳು ಉತ್ಪತ್ತಿಯಾಗುತ್ತಿದ್ದವು ಎನ್ನಲಾಗಿತ್ತು. ಆ ಮಹಿಳೆಯನ್ನು ನಾವು ಪರೀಕ್ಷೆಗೊಳಪಡಿಸಿದಾಗ, ಹಾರ್ಮೋನ್ ವಿಶ್ಲೇಷಣೆಯು ಅಸ್ತವ್ಯಸ್ತವಾಗಿತ್ತು, ಅಂಡಾಶಯದ ಮಾರ್ಗಗಳು ಕಿರಿದಾಗಿದ್ದವು ಮತ್ತು ಎಎಂಎಚ್ ಕೊರತೆ ಕೂಡ ಇತ್ತು. ಸಾಮಾನ್ಯವಾಗಿ ಮಹಿಳೆಯರಲ್ಲಿನ ಎಎಂಎಚ್ ಪ್ರಮಾಣವು ಅವರ ವಯಸ್ಸಿಗೆ ಅನುಗುಣವಾಗಿ 1.5–2.5 ಪ್ರಮಾಣದಲ್ಲಿರತಕ್ಕದ್ದು. ಅಲ್ಲದೆ ಸ್ಕ್ಯಾನ್ ತಪಾಸಣೆಯಲ್ಲಿ ಅವರ ಗರ್ಭಾಶಯವು ಒಂದೇ ಭಾಗದಲ್ಲಿ ಬೆಳವಣಿಗೆ ಹೊಂದಿರುವುದು ಕಂಡುಬಂದಿತ್ತು ಮತ್ತು ಇದನ್ನು ಯುನಿಕಾರ್ನುಯೇಟ್ ಯುಟೇರಸ್ ಎನ್ನಲಾಗುತ್ತದೆ. ಸಾಮಾನ್ಯವಾಗಿ ಇಂತಹ ಯುನಿಕಾರ್ನುಯೇಟ್ ಯುಟೆರಸ್‌ನಲ್ಲಿನ ಅನಾನೊಲಸ್ ಯುಟೆರಸ್‌ನಂತಹ ದಪ್ಪನಾದ ಎಂಡೊಮೆಟ್ರಿಯಂ ಮತ್ತು ವಾಸ್ಕುಲಾರಿಟಿ ಬಡವಾಗಿರುವುದರಿಂದ ಭ್ರೂಣ ಕಸಿ ಮಾಡುವುದು ತುಂಬಾ ಕ್ಲಿಷ್ಟಕರವಾಗಿರುತ್ತದೆ. ಈ ಮಹಿಳೆಯಲ್ಲಿನ ಅಂಡಾಣುಗಳ ಪ್ರಮಾಣ ಮತ್ತು ಗುಣಮಟ್ಟದಲ್ಲಿ ಕೊರತೆ ಇದ್ದಿದ್ದರಿಂದಾಗಿ, ಆ ದಂಪತಿಗಳಿಗೆ ದಾನಿ ಅಂಡಾಣುಗಳ ಬಗ್ಗೆ ತಿಳಿಸಿ ಹೇಳಲಾಯಿತು ಮತ್ತು ಗಂಡನ ವೀರ್ಯಾಣುವಿನಿಂದ ಐವಿಎಫ್ ನೀಡುವ ವಿಚಾರ ತಿಳಿಸಲಾಯಿತು. ದಾನಿ ಅಂಡಾಣುಗಳ ಕುರಿತಾಗಿ ನಿರ್ಧರಿಸಲು ಆ ದಂಪತಿಗಳಿಬ್ಬರು ಸಾಕಷ್ಟು ಸಮಯ ತೆಗೆದುಕೊಂಡರು. ಅಂತಿಮವಾಗಿ ತಮ್ಮ ಸಮ್ಮತಿ ಸೂಚಿಸಿದರು. ಗಂಡನ ವೀರ್ಯಾಣು ಮೂಲಕ ದಾನಿ ಅಂಡಾಣುಗಳನ್ನು ಫಲಪ್ರದಗೊಳಿಸಲಾಯಿತು ಮತ್ತು ಭ್ರೂಣವನ್ನು ರೂಪಿಸಲಾಯಿತು. ಮಹಿಳೆಯನ್ನು ಹಾರ್ಮೋನ್ ಬದಲಾವಣೆ ಚಿಕಿತ್ಸೆಗೆ ಒಳಪಡಿಸಿದ ನಂತರ ಶೀತಲಿಕೃತ ಭ್ರೂಣವನ್ನು ವರ್ಗಾವಣೆ ಮಾಡಲಾಯಿತು. ಮೊದಲ ಪ್ರಯತ್ನದಲ್ಲಿಯೇ ಆ ಮಹಿಳೆಯು ಗರ್ಭಧರಿಸಿದ್ದರು. 12ನೇ ವಾರದಲ್ಲಿ ವೈದ್ಯಕೀಯ ತಪಾಸಣೆಗಳನ್ನು ಮಾಡಲಾಯಿತು. ಇದೀಗ ಆ ಮಹಿಳೆ 20 ವಾರಗಳ ಗರ್ಭಾವಸ್ಥೆಯನ್ನು ಆನಂದಿಸುತ್ತಿದ್ದಾರೆ.

## ಪ್ರಶ್ನೆ ಪರಿಹಾರ

**ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು? ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲಿ ತಜ್ಞ ವೈದ್ಯರು ಉತ್ತರಿಸುತ್ತಾರೆ. ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ**

**210/ಎ, 50 ಅಡಿ ರಸ್ತೆ, 14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು–560 050**

**ದೂರವಾಣಿ/ಎಸ್‌ಎಂಎಸ್: 9886915556, 8884183338, 9148038971,**

**Toll Free : 18002008288**

**ಇಂದಿನ ಅನಾರೋಗ್ಯಕರ** ಜೀವನಶೈಲಿ, ಅನುವಂಶಿಕ ಸ್ಥಿತಿಗತಿ ಮತ್ತು ಪರಿಸರ ವೈಪರಿತ್ಯಗಳಿಂದಾಗಿ ಸ್ತ್ರೀ ಮತ್ತು ಪುರುಷ ಎಲ್ಲರಲ್ಲೂ ಅಂಡಾಣು ಮತ್ತು ವೀರ್ಯಾಣುಗಳ ಪ್ರಮಾಣ ಮತ್ತು ಗುಣಮಟ್ಟದ ಆತಂಕವನ್ನು ಎದುರಿಸುವಂತಾಗಿದ್ದು, ಇದು ಮನುಕುಲಕ್ಕೆ ಒಂದು ಎಚ್ಚರಿಕೆ ಗಂಟೆಯಾಗಿ ಪರಿಣಮಿಸಿದೆ!

**ಶೇಕಡ 1 ರಿಂದ 2 ರಷ್ಟು** ಸಂತಾನರಹಿತ ಮಹಿಳೆಯರಲ್ಲಿ ಸಾಮಾನ್ಯವಾಗಿ ಯುಟೆರೈನ್ ಅನಾಮಲಿ ಸಮಸ್ಯೆ ಕಂಡುಬರುತ್ತದೆ.

ಮಹಿಳೆಯರು ನೈಸರ್ಗಿಕವಾಗಿ ಗರ್ಭಧರಿಸುವು ದರಿಮದಾಗಿ ಸಾಕಷ್ಟು ಅನಾಮಲಿಗಳು ಗಮನಕ್ಕೆ ಬಾರದಿರುತ್ತವೆ. ಮಗು ಜನಿಸುವ ಸಂದರ್ಭದಲ್ಲಿ ಮಾತ್ರ ಇದು ಗೋಚರಿಸಬಹುದಾಗಿರುತ್ತದೆ.

ಆದರೆ ಸೆಪ್ಟಾಟಿಕ್ ಯುಟೆರಸ್, ಬೈಕಾಸ್ಮಾಟಿಕ್ ಯುಟೆರಸ್, ಯುನಿಕಾಸ್ಮಾಟಿಕ್ ಯುಟೆರಸ್‌ನಂತಹ ಕೆಲವು ಅನಾಮಲಿಗಳ ಸಂದರ್ಭದಲ್ಲಿ ಗಂಭೀರ ಶಸ್ತ್ರಚಿಕಿತ್ಸೆ ಎದುರಿಸಬೇಕಾಗುತ್ತದೆ.

**ಆದ್ದರಿಂದ ಗರ್ಭಧಾರಣೆಯಲ್ಲಿ ಸಮಸ್ಯೆಯನ್ನು** ಎದುರಿಸುತ್ತಿರುವ ದಂಪತಿಗಳು ಕಡ್ಡಾಯವಾಗಿ 3ಡಿ ಸ್ಕ್ಯಾನ್‌ಗೆ ಒಳಗಾಗಿ ಯುಟೆರೈನ್ ಅನಾಮಲಿಗಳನ್ನು ನಿವಾರಿಸಿಕೊಳ್ಳುವುದು ಒಳಿತು. ಒಂದು ಬಾರಿ ಅನಾಮಲಿ ಪತ್ತೆಯಾದ ಬಳಿಕ ಅದನ್ನು ಹೈಪಟ್ರೊ ಲ್ಯಾಪರಸ್ಕೋಪಿ ಮೂಲಕ ಸರಿಪಡಿಸಬಹುದು. ಕಂಜೆಂಕ್ಷನ್ ಬಳಿಕ ಕೆಲವರಲ್ಲಿ ಗರ್ಭಪಾತ ತಡೆಗಟ್ಟಲು ಸರ್ವಿಕಲ್ ....... ಅವಶ್ಯವಾಗಬಹುದು. ಇಲ್ಲವಾದಲ್ಲಿ ಸರಳವಾದ, ಕ್ಲಿಷ್ಟರಹಿತ ಜನನ ಉಂಟಾಗುತ್ತದೆ.

**ಆದರೆ ಇತ್ತೀಚೆಗಿನ** ವೈಜ್ಞಾನಿಕ ಮತ್ತು ತಂತ್ರಜ್ಞಾನ ಆಧಾರಿತ ಸುಧಾರಣೆಗಳಿಂದಾಗಿ ಅಂಡಾಶಯ ವೈಫಲ್ಯತೆಗೆ ಈಡಾಗಿರುವ, ವೀರ್ಯಾಣು ವಿಶ್ಲೇಷಣೆ ಶೂನ್ಯವಿರುವ, ಕುಂಠಿತ ವೀರ್ಯಾಣು ಚಲನಶೀಲತೆಯಿಂದ ಬಳಲುತ್ತಿರುವವರಿಗೆ, ಕಳಪೆ ಮಾರ್ಫಾಲಜಿ ಇತ್ಯಾದಿಗಳ ಸಮಸ್ಯೆಗೆ ಒಳಗಾಗಿರುವವರಿಗೆ ಸಾಕಷ್ಟು ನೆರವಾಗಿದೆ. ಭೂಮಿಯ ಮೇಲಿನ ಪ್ರತಿಯೊಬ್ಬರಿಗೂ ಗರ್ಭಧಾರಣೆಯಲ್ಲಿ ಉಪಯುಕ್ತವಾಗಬಲ್ಲ ಅತ್ಯುತ್ತಮ ದಾನಿ ಅಂಡಾಣು ಕಾರ್ಯಕ್ರಮ, ದಾನಿ ವೀರ್ಯಾಣು ಕಾರ್ಯಕ್ರಮ, ಸುಮೊಪಸಿ ಕಾರ್ಯಕ್ರಮಗಳು ನಮ್ಮಲ್ಲಿ ಲಭ್ಯವಿರುತ್ತವೆ.......



ಡಾ.ಆಶಾ.ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್

**ಪ್ರಶ್ನೆ ಪರಿಹಾರ?**

**Ph: 9886915556, 080-26673777**